

ದಾಖಲೆಗಳು. ವಿಷಯ ಗೊತ್ತಾದ ಬಳಿಕ ಪೊಲೀಸರು ಠಾಣೆಯಿಂದ ವಾಪಸ್ ಕರೆತಂದು ಮೊದಲಿದ್ದ ಸ್ಥಳದಲ್ಲೇ ಕೂರಿಸಿ ಹೋದರು!

ಶಿಕ್ಷಕ ವೃತ್ತಿಯಲ್ಲಿ ಆಗಿರುವ ಭಾರಿ ಬದಲಾವಣೆಗಳ ರೂಪಕದಂತಿವೆ ಮೇಲಿನ ಈ ಎರಡು ಸನ್ನಿವೇಶಗಳು. ಅರಸೀಕೆರೆ ಪ್ರಸಂಗವೇನೂ ನೈಜ ಘಟನೆಯಲ್ಲ. ಶಿಕ್ಷಕರ ಮೇಲಿನ ಹೊರೆಯನ್ನು ನಿರಂತರವಾಗಿ ಹೆಚ್ಚಿಸುತ್ತಿರುವ ಸರ್ಕಾರದ ಕ್ರಮಕ್ಕೆ ಗೇಲಿ ಮಾಡಲು ಹುಟ್ಟಿಕೊಂಡಂತಹ 'ಸುದ್ದಿ'.

ಸರ್ಕಾರಿ ಇಲ್ಲವೆ ಖಾಸಗಿ ರಂಗದಲ್ಲಿ ಯಾವುದೇ ಹುದ್ದೆಗೆ ನೇಮಕ ಮಾಡಿಕೊಳ್ಳುವಾಗ ನೇಮಕಾತಿ ಆದೇಶದಲ್ಲಿಯೇ ಆ ಹುದ್ದೆಯ 'ಹೊಣೆ' ಏನೆಂಬುದು ಸ್ಪಷ್ಟವಾಗಿರುತ್ತದೆ. ಅಂತೆಯೇ ಶಿಕ್ಷಕರ ಮೂಲ ಜವಾಬ್ದಾರಿ ಪಾಠ ಮಾಡುವುದೇ ಆಗಿದೆ. ವಿದ್ಯಾರ್ಥಿಗಳಿಗೆ ಬೋಧಿಸುವುದು ಹಾಗೂ ಆ ಬೋಧನೆಗೆ ಅಗತ್ಯವಾದ ಕೌಶಲ್ಯಗಳನ್ನು ಪಡೆಯಲು ನಿರಂತರ ಪ್ರಯತ್ನಿಸುವುದು ಶಿಕ್ಷಕರ ಕರ್ತವ್ಯ. ಆದರೆ ಇದಕ್ಕೆ ವಿರುದ್ಧವಾದ ಚಟುವಟಿಕೆಗಳಲ್ಲಿಯೇ ಶಿಕ್ಷಕರನ್ನು ಒತ್ತಾಯಪೂರ್ವಕವಾಗಿ ತೊಡಗಿಸಲಾಗುತ್ತಿದೆ. ಆದರೆ, ಮೂಲ ಕೆಲಸದ ಜೊತೆಗೆ ಹೆಚ್ಚುವರಿ ಹೊರೆಯನ್ನೂ ಅವರ ಮೇಲೆ ಹೊರಿಸಲಾಗಿದೆ. ಬೇರೆ ಯಾವ ನೌಕರನೂ ಇಷ್ಟೊಂದು ಭಾರವನ್ನು ಹೊತ್ತ ಉದಾಹರಣೆಯಿಲ್ಲ.

## ಶಿಕ್ಷಕರ ಮೇಲೇ ಏಕೆ ಕಣ್ಣು?

ನೀತಿ ನಿರೂಪಣೆಯ ಸ್ಥಾನಗಳಲ್ಲಿ ಕುಳಿತವರ ಕಣ್ಣುಗಳನ್ನು ಕುಕ್ಕಿಸುವಂತಹ ದೊಡ್ಡ ಸಂಖ್ಯಾಬಲ ಶಿಕ್ಷಕರದು. ಜರಡಿಯ ಮೇಲೆ ಬಿದ್ದ ನೀರಿನಂತೆ ರಾಜ್ಯದಾದ್ಯಂತ ಎಲ್ಲ ಭಾಗಗಳಲ್ಲೂ ಸಮ ಪ್ರಮಾಣದಲ್ಲಿ ಲಭ್ಯವಿರುವ ನೌಕರರ ವರ್ಗ ಇದು. ನೀವು ಯಾವುದೇ ಹಳ್ಳಿಗೆ ಹೋಗಿ, ಬೇರೆ ಯಾವ ನೌಕರ ಸಿಗದಿದ್ದರೂ ಶಿಕ್ಷಕರು ಮಾತ್ರ ಇದ್ದೇ ಇರುತ್ತಾರೆ. ಮೇಷ್ಟ್ರುಗಳ ರೂಪದಲ್ಲಿ ಲಕ್ಷಾಂತರ ಮಾನವ ಸಂಪನ್ಮೂಲ ಒಟ್ಟಿಗೆ ಸಿಗುತ್ತದೆ ಎಂಬ ಒಂದೇ ಕಾರಣದಿಂದ ರಾಜ್ಯದ ತುಂಬಾ ಏಕಕಾಲದಲ್ಲಿ ಯಾವುದೇ ಕೆಲಸ ಆಗಬೇಕೆಂದಿದ್ದರೆ ಸರ್ಕಾರ ಇವರತ್ತಲೇ ನೋಡಲು ಆರಂಭಿಸಿತು. ಜನಗಣತಿಯಿಂದ ಶುರುವಾದ ಶಿಕ್ಷಕರ ಬೋಧಕೇತರ ಹೊಣೆ ಈಗ ವಿದ್ಯಾರ್ಥಿಗಳ ಸ್ಕಾಲರ್‌ಷಿಪ್‌ಗಾಗಿ, ಇಂಟರ್ನೆಟ್ ಸಂಪರ್ಕಕ್ಕಾಗಿ ಜಾಲಾಡುತ್ತಾ, ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ



